ತಮ್ಮ ಸ್ಥೈರ್ಯ ಕಳೆದುಕೊಳ್ಳದಿರಲು ಇದು ಒಂದು ಉದಾಹರಣೆಯೂ ಆಗಬಹುದು ಎಂದು ನನ್ನ ನಂಬಿಕೆ.

ಒಂದು ರೀತಿಯಲ್ಲಿ ಈ ರೀತಿಯ ಕಥನಾ ಶೈಲಿ ಸಾಹಿತ್ಯಕ್ಕೆ ಹೊಸದೇನಲ್ಲ; ಚರಿತ್ರೆ ಮತ್ತು ಪ್ರಸ್ತುತವನ್ನು ಒಟ್ಟಿಗೆ ಜೋಡಿಸುವ ಶೈಲಿಯನ್ನು ಡ್ಯಾನ್ ಬ್ರೌನ್ ಮುಂತಾದವರು ಈಗಾಗಲೆ ಅಳವಡಿಸಿಕೊಂಡಿದ್ದಾರೆ. ಹಾಗೆಯೆ, ಮೈಕೇಲ್ ಕ್ರೀಟನ್ ಅವರ ಕಾದಂಬರಿ 'ದಿ ಸ್ಟೇಟ್ ಆಫ್ ಫಿಯರ್'ನಲ್ಲಿ ಆಕರಗಳನ್ನೂ, ಚಿತ್ರಗಳನ್ನೂ ಕತೆಯೊಳಗೆ ಜೋಡಿಸುವ ಚಳಕವನ್ನು ಕಾಣಬಹುದು; ಕನ್ನಡದಲ್ಲಿಯೂ ನೇಮಿಚಂದ್ರ ಅವರ 'ಯಾದ ವಶೇಮ್'ನಲ್ಲಿ ಇದರ ಛಾಯೆಯನ್ನು ಗಮನಿಸಬಹುದು. ನನ್ನ ಕತೆ, ಕಾದಂಬರಿಗಳಲ್ಲಿ ಆ ಎರಡೂ ಅಂಶಗಳನ್ನು ಒಟ್ಟಿಗೆ ತಂದಿರುವುದು ಸ್ಪಷ್ಟವಾಗಿ ಕಾಣಿಸಿಕೊಂಡಿದೆ ಅಷ್ಟೆ. ಈ ಶೈಲಿಯ ಬಗ್ಗೆ ನನ್ನಲ್ಲಿ ಮತ್ತಷ್ಟು ಉತ್ಸಾಹ ತುಂಬಿದ್ದು ನಮ್ಮೂರಿನ(ಕೋಟಿಗಾನಹಳ್ಳಿ) ರಾಮಯ್ಯ. 'ಕನಕಮುಸುಕು'ವನ್ನು ಓದಿ 'ನೀವು ಈ ಶೈಲಿಯಲ್ಲಿಯೇ ಮುಂದುವರಿಸಿ ಮತ್ತಷ್ಟು ಬರೆದರೆ ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಹಾದಿಯನ್ನು ತೋರಿಸಿಕೊಟ್ಟಂತೆಯೇ ಸರಿ' ಎಂದು ಹೇಳಿ ರಾಮಯ್ಯ ನನ್ನಲ್ಲಿ ಉತ್ಸಾಹ ತುಂಬಿದ್ದರು. ಇದರ ಜೊತೆಗೆ, ಓದುಗರನ್ನು ಕಥಾನಾಯಕಿಯ(ರ) ಜೊತೆಜೊತೆಗೆ, ಸಂಶೋಧನೆಯ ಹಾದಿಯಲ್ಲಿ ಸಾಗುವಂತೆ ಕರೆದೊಯ್ಯುವ ಕಥಾಶೈಲಿಯನ್ನು ಬಹಳಷ್ಟು ಓದುಗರು ಮೆಚ್ಚಿ ಬರೆದಿದ್ದಾರೆ. ಇತ್ತೀಚೆಗೆ ಕನ್ನಡ ಭಾಷೆಯ ಕೆಲವು ಸ್ನಾತಕೋತ್ತರ ವಿದ್ಯಾರ್ಥಿಗಳು ಈ ಶೈಲಿಯ ಕುರಿತು ಪ್ರಬಂಧಗಳ ರಚನೆಗೆ ಮುಂದಾಗುತ್ತಿರುವುದು ಇದರ ಹರವನ್ನು ತೋರಿಸುತ್ತದೆ ಕೂಡ.

## ಕಾದಂಬರಿಗೂ ಮಿಗಿಲಾದ ಖುಷಿ ತಂದದ್ದು...

ಹೀಗೆ ಜೀವನ ಪೂರ್ತಿ ಸಾಹಿತ್ಯ ಎನ್ನಬಹುದಾದ ಯಾವುದೇ ರಚನೆಗೆ ಕೈಹಾಕದಿದ್ದವ, ಐವತ್ತು ದಾಟಿದ ಇಳಿವಯಸ್ಸಿನಲ್ಲಿ ಹೆದರುತ್ತಲೆ ಬರೆಯಲು ಪ್ರಯತ್ನಿಸಿದವ, ಮುವತ್ತೈದು ವರ್ಷಗಳ ಕಾಲ ಕನ್ನಡದಲ್ಲಿ ಏನನ್ನೂ ಬರೆಯದಿದ್ದವ, ಆಂಗ್ಲಭಾಷೆಯಲ್ಲಿ ಪ್ರಾರಂಭಿಸಿ ಕೊನೆಗೆ ತಾಯಿ ಭಾಷೆಯ ಗಮಲಿಗೆ ಸೋತವ, ನಾನು, ಬರೆದ ಕತೆ, ಕಾದಂಬರಿಗಳನ್ನು ಒಂದಷ್ಟು ಜನ ಓದಿ ಮೆಚ್ಚಿದರೆಂದರೆ ಅದರಿಂದ ಸಿಗುವ ಆನಂದ... ಆದರೆ ಅದಕ್ಕೂ ಮಿಗಿಲಾದ ಖುಷಿ ಕೊಟ್ಟ ಘಟನೆಗಳು ಅದೆಷ್ಟೋ! ಅವುಗಳಲ್ಲಿ ಕೆಲವು:

- ಜನಶ್ರೀ ವಾಹಿನಿಗಾಗಿ 'ಕಾಲಗರ್ಭ' ಎಂಬ ಸಂಶೋಧನಾತ್ಮಕ ಕಾರ್ಯಕ್ರಮದ ಚಿತ್ರೀಕರಣಕ್ಕೆಂದು ನಾನು ಬೇಲೂರಿಗೆ ಹೋಗಿದ್ದಾಗ, ಸುಮಾರು 20–25 ವಯಸ್ಸಿನ ಕೆಲ ಯುವಕ ಯುವತಿಯರ ದಂಡು ನನ್ನನ್ನು ಕಂಡು, ಬಳಿ ಬಂದು ನನ್ನ ಕತೆ, ಕಾದಂಬರಿಗಳ ಬಗ್ಗೆ ಚರ್ಚಿಸುತ್ತಿರುವಂತೆ, ಒಬ್ಬಾಕೆ ಹೇಳಿದ್ದಳು: 'ನಾವು 'ಕನಕಮುಸುಕು' ಕಥಾ ಹಂದರದ ಎಲ್ಲ ಜಾಗಗಳಿಗೂ ಕಾರಿನಲ್ಲಿ ಟೂರ್ ಹೋಗಿ ಬಂದೆವು ಸರ್, ಹಾಗೆಯೇ 'ಕರಿಸಿರಿಯಾನ ಟ್ರಿಪ್'ಗೆ ಪ್ಲಾನ್ ಮಾಡಿದ್ದೇವೆ' ಎಂದಾಗ,
- 'ಏಳು ವರ್ಷದ ನನ್ನ ಮಗನಿಗೆ ಕನ್ನಡ ಓದಲು ಬರುತ್ತಿರಲಿಲ್ಲ; ಆದರೆ 'ಸುಧಾ'ದಲ್ಲಿ ಬರುತ್ತಿದ್ದ 'ಕರಿಸಿರಿಯಾನ'ದ ಕಂತುಗಳನ್ನು ನಾನೆ ಓದಿ ಹೇಳುತ್ತಿದ್ದಂತೆ ಅವನಲ್ಲಿ ಕುತೂಹಲ ಹೆಚ್ಚಾಗಿ ತಾನೆ ಓದಲು ಪ್ರಯತ್ನಿಸುತ್ತೇನೆಂದು ತೀರ್ಮಾನಿಸಿ ಕನ್ನಡ ಕಲಿಯಲು ಪ್ರಾರಂಭಿಸಿದ್ದಾನೆ' ಎಂದು ಒಬ್ಬ ತಾಯಿ ಹೇಳಿದಾಗ,
- 'ನಾನು ಫಾರ್ಮಸಿಯಲ್ಲಿ ಪದವಿ ಕೋರ್ಸ್‌ಗೆ ಸೇರಿಕೊಂಡಿದ್ದೆ, ಆದರೆ ಚರಿತ್ರೆಯ ಬಗ್ಗೆ ನಿಮ್ಮ